ಕರ್ನಾಟಕ ಸರ್ಕಾರ

GOVERNMENT OF KARNATAKA

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

**ZILLA PANCHAYAT OFFICE, BELGAUM-590002**


ದೂರವಾಣಿ Telephone: 0831-2407201, 0831-2407209

ಫ್ಯಾಕ್ಸ್ / Fax: 0831-2429662

e-mail: ceo_zp_bgm@nic.in, pddrdabgm@gmail.com


---

ಕ್ರ.ಜಿಪಂ/ರಾಗ್ರಾಉ/ವಿವ-3-VII/13-14 — ಬೆಳಗಾವಿ, ದಿನಾಂಕ:16-01-2014.

ರಿಗೆ

1) ಕಾರ್ಯಕಾರಿ ಅಭಿಯಂತರರು,
ಸಣ್ಣನೀರಾವರಿ (ಜಲ ಸಂಪನ್ಮೂಲ ಇಲಾಖೆ)
ಬೆಳಗಾವಿ
2) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಸಾಮಾಜಿಕ ಅರಣ್ಯ ಬೆಳಗಾವಿ.
3) ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ ಬೆಳಗಾವಿ,
4) ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು,
ಬೆಳಗಾವಿ.
5) ಉಪ ನಿರ್ದೇಶಕರು,ರೇಷ್ಮೆ ಇಲಾಖೆ ಬೆಳಗಾವಿ.
6) ಉಪ ನಿರ್ದೇಶಕರು, ಪಶು ಸಂಗೋಪನೆ ಇಲಾಖೆ ಬೆಳಗಾವಿ.
7) ಜಂಟಿ ಕೃಷಿ ನಿರ್ದೇಶಕರು ಕೃಷಿ ಇಲಾಖೆ ಬೆಳಗಾವಿ.
8) ಜಿಲ್ಲೆಯ ಎಲ್ಲ ಕಾರ್ಯನಿರ್ವಾಹಕ ಅಧಿಕಾರಿಗಳು,
ತಾಲೂಕ ಪಂಚಾಯತ, ಬೈಲಹೊಂಗಲ, ಬೆಳಗಾವಿ,ಚಿಕ್ಕೋಡಿ,
ಗೋಕಾಕ,ಹುಕ್ಕೇರಿ, ಖಾನಾಪೂರ, ರಾಮದುರ್ಗ, ರಾಯಬಾಗ
ಹಾಗೂ ಸವದತ್ತಿ

ವಿಷಯ : ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬರಪೀಡಿತ ತಾಲೂಕುಗಳಲ್ಲಿ ಕೆಲಸ ನಿರ್ವಹಿಸುವ ಕೂಲಿ ಕಾರ್ಮಿಕರ ಉದ್ಯೋಗ ದಿನಗಳ ಮಿತಿಯನ್ನು 100 ರಿಂದ 150 ದಿನಗಳಿಗೆ ಹೆಚ್ಚಿಸಿ ಕೇಂದ್ರ ಸರ್ಕಾರವು ಆದೇಶ ಹೊರಡಿಸಿರುವ ಕುರಿತು.

ಉಲ್ಲೇಖ: ಆಯುಕ್ತರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರು ಇವರ ಪತ್ರ ಸಂ. ಗ್ರಾಅಪ :418:ಉಖಾಯೋ:2012 ದಿ:03-01-2014

***

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂದಿಸಿದಂತೆ ಉಲ್ಲೇಖದಡಿ ಸ್ವೀಕೃತವಾದ ಸರ್ಕಾರದ ಪತ್ರ ಹಾಗೂ ಅಡಕಗಳ ನೆರಳು ಪ್ರತಿಗಳನ್ನು ಈ ಪತ್ರದ ಜೊತೆಗೆ ಲಗತ್ತಿಸಿ ಕಳುಹಿಸಲಾಗಿದೆ.

ಸದರಿ ಪತ್ರದಲ್ಲಿ 2013-14ನೇ ಸಾಲಿನಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬರಪೀಡಿತ ತಾಲೂಕುಗಳಲ್ಲಿ ಕೆಲಸ ನಿರ್ವಹಿಸುವ ಕೂಲಿ ಕಾರ್ಮಿಕರ ಉದ್ಯೋಗ ದಿನಗಳ ಮಿತಿಯನ್ನು 100 ರಿಂದ 150 ದಿನಗಳಿಗೆ ಹೆಚ್ಚಿಸಿ ಕೇಂದ್ರ ಸರ್ಕಾರವು ಆದೇಶ ಹೊರಡಿಸಿರುವ ಕುರಿತು ವಿವರಿಸಿರುತ್ತಾರೆ.

ಬರದ ಹಿನ್ನಲೆಯಲ್ಲಿ ಗ್ರಾಮೀಣ ಜನರು ವಲಸೆ ಹೋಗುವ ಸಾಧ್ಯತೆಗಳ ಅಂಶವನ್ನು ದೃಷ್ಟಿಯಲ್ಲಿಟ್ಟುಕೊಂಡು ಹಾಗೂ ಅದನ್ನು ತಡೆಗಟ್ಟಲು ಮತ್ತು ಅವರ ಜೀವನೋಪಾಯಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳು ಆಯವ್ಯಯದಲ್ಲಿ ಘೋಷಿಸಿರುವ 15 ಕಾರ್ಯಕ್ರಮಗಳಲ್ಲಿಯ ಅದರಲ್ಲಿಯು ಕೂಲಿ ಆಧಾರಿತ ಕಾಮಗಾರಿಗಳನ್ನು ತೆಗೆದುಕೊಂಡು ಅನುಷ್ಠಾನಗೊಳಿಸಲು ಸೂಚಿಸಿರುತ್ತಾರೆ. ಇದರ ಜೊತೆಗೆ ಜನರಿಗೆ ಮತ್ತು ದನಕರುಗಳಿಗೆ ಕುಡಿಯುವ ನೀರನ್ನು ಒದಗಿಸಲು ಅಂತರ್‌ಜಲ ಹೆಚ್ಚಿಸಲು, ನೀರಿನ ಕೊಯ್ಲಿಮ ವಿನ್ಯಾಸ (Water Harvesting Programmes )

ಆಯುಕ್ತರು ನೀಡಿರುವ ಸಲಹೆ ಸೂಚನೆಗಳನ್ನು ಕಟ್ಟುನಿಟ್ಟಾಗಿ ಅಳವಡಿಸಿಕೊಂಡು ಯೋಜನೆಯನ್ನು ಯಶ್ವಸಿಯಾಗಿ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ.

**ಪ್ರತಿಯನ್ನು ಮಾಹಿತಿ ಕುರಿತು ಸಲ್ಲಿಸಲಾಗಿದೆ.**

ಆಯುಕ್ತರು ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ,ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ,2,ನೇಮಹಡಿ, 3ನೇ ಹಂತ,ಬಹು ಮಹಡಿ ಕಟ್ಟಡ, ಡಾ:ಅಂಬೇಡಕರ ವೀದಿ, ಬೆಂಗಳೂರು-01

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

**ZILLA PANCHAYAT OFFICE, BELGAUM-590002**


| | | | |
|---|---|---|---|
| ದೂರವಾಣಿ Telephone | 0831-2407201<br>0831-2407209 | ಫ್ಯಾಕ್ಸ್/Fax<br>e-mail | 0831-2429662<br>ceo_zp_bgm@nic.in<br>pddrdabgm@mail.com |


ಕ್ರಸಂ:ಜಿಪ ರಾಗ್ರಾಉ/ ವಿವ/ /2013-14 ದಿನಾಂಕ: 16-1-2014.

1) ಕಾಯಕಾರಿ ಅಬಿಯಂತರರು
ಪಂಚಾಯತ ರಾಜ್ ಇಂಜಿನಿಯರಿಂಗ ವಿಭಾಗ ಬೆಳಗಾವಿ/ಚಿಕ್ಕೋಡಿ
2) ಜಿಲ್ಲೆಯ ಎಲ್ಲ ಸಹಾಯಕ ಕಾರ್ಯಕಾರಿ ಅಭಿಯಂತರರು
ಪಂಚಾಯತ ರಾಜ್ ಇಂಜಿನಿಯರಿಂಗ ಉಪ ವಿಭಾಗ
3) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಸಾಮಾಜಿಕ ಅರಣ್ಯ ಬೆಳಗಾವಿ / ಪ್ರಾದೇಶಿಕ ಬೆಳಗಾವಿ /ಗೋಕಾಕ
4) ಜಂಟಿ ನಿರ್ದೇಶಕರು ಕೃಷಿ ಇಲಾಖೆ ಬೆಳಗಾವಿ
5) ಉಪ ನಿರ್ದೇಶಕರು ತೋಟಗಾರಿಕೆ ಇಲಾಖೆ ಬೆಳಗಾವಿ
6) ಉಪ ನಿರ್ದೇಶಕರು ಪಶುಪಾಲನಾ ಇಲಾಖೆ ಬೆಳಗಾವಿ
7) ಉಪ ನಿರ್ದೇಶಕರು ರೇಷ್ಮೆ ಇಲಾಖೆ ಬೆಳಗಾವಿ
8) ಕಾರ್ಯಕಾರಿ ಅಭಿಯಂತರರು ಸಣ್ಣ ನೀರಾವರಿ ಇಲಾಖೆ ಬೆಳಗಾವಿ
(ಡಾಕ ಬಂಗಲಾ ಶಹಾಪೂರ)
9) ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು ಬೆಳಗಾವಿ
10)ಜಿಲ್ಲೆಯ ಎಲ್ಲ ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲೂಕ ಪಂಚಾಯತ
11)ಜಿಲ್ಲೆಯ ಎಲ್ಲ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿಗೊಂಡ
ತಾಂತ್ರಿಕ ಸಹಾಯಕರು(ಕಾನಿ.ಅ ತಾ.ಪಂ.ರವರ ಮುಖಾಂತರ ರವಾನೆ)
11)ಜಿಲ್ಲೆಯ ಎಲ್ಲ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು
ಗ್ರಾಮ ಪಂಚಾಯತ ( ಕಾ.ನಿ. ಅ ತಾ.ಪಂ. ರವರ ಮುಖಾಂತರ ರವಾನೆ)

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಎಲ್ಲಾ ಬಗೆಯ ಅಂದಾಜು ಪಟ್ಟಿ, ಅಳತೆ ಪುಸ್ತಕ ಮತ್ತು ಮಾರ್ಗಸೂಚಿಗಳನ್ನು ಕನ್ನಡದಲ್ಲಿಯೇ ಸಿದ್ದಪಡಿಸುವ ಕುರಿತು.

ಉಲ್ಲೇಖ:ಆಯುಕ್ತರು ಗ್ರಾಮೀಣಾಭಿವೃದ್ಧಿ ಬೆಂಗಳೂರು ರವರ ಪತ್ರ ಸಂಖ್ಯೆ. ಗ್ರಾಅಪ.186 ಉಖಾಯೋ.2013 ದಿನಾಂಕ: 26-12-2013.

ಮೇಲ್ಕಂಡ ವಿಷಯಕ್ಕೆ ಸಂಭಂಧಿಸಿದಂತೆ ಉಲ್ಲೇಖದಡಿ ಸ್ವೀಕೃತವಾದ ಆಯುಕ್ತಾಲಯದ ಪತ್ರದ ಪ್ರತಿಯನ್ನು ಈ ಪತ್ರದ ಜೊತೆಗೆ ಲಗತ್ತಿಸಿ ಕಳುಹಿಸಲಾಗಿದೆ. ಸದರಿ ಪತ್ರದಲ್ಲಿ ಮಹಾತ್ಮಾ ಗಾಂಧೀ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನ ಕುರಿತಂತೆ ಎಲ್ಲಾ ತರಹದ ಅಂದಾಜು ಪಟ್ಟಿ ಅಳತೆ ಪುಸ್ತಕ ಮತ್ತು ಮಾರ್ಗಸೂಚಿಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ಕನ್ನಡದಲ್ಲಿಯೇ ಸಿದ್ದಪಡಿಸಲು ನಿರ್ದೇಶನ ನೀಡಿರುತ್ತಾರೆ. ಅದರಂತೆ ಅಗತ್ಯ ಕ್ರಮ ಕೈಕೊಳ್ಳಲು ಸೂಚಿಸಿದೆ. ಅಂದಾಜು ಪಟ್ಟಿಗಳಲ್ಲಿ ತಾಂತ್ರಿಕ ವಿವರಣೆ ಇರಬೇಕು. ಒಂದು ವೇಳೆ ಪ್ರಕಟಿತ ದರಪಟ್ಟಿಯಲ್ಲಿ ಕೇವಲ ಆಂಗ್ಲ ಭಾಷೆಯ ವಿವರಣೆ ಇದ್ದಲ್ಲಿ ಇದನ್ನು ಕನ್ನಡದಲ್ಲಿ ಅನುವಾದಿಸಿಕೊಂಡು ಆಂಗ್ಲ ವಿವರಣೆಯೊಂದಿಗೆ ನಮೂದಿಸಲು ಕ್ರಮ ಕೈಕೊಳ್ಳತಕ್ಕದ್ದು. ಈ ಯೋಜನೆಯಡಿ ಪಾರದರ್ಶಕತೆ ಮತ್ತು ಉತ್ತರದಾಯತ್ವ ಎರಡು ಪ್ರಮುಖ ತತ್ವಗಳಾಗಿದ್ದು ಜನ ಸಾಮಾನ್ಯರಿಗೆ ಅರ್ಥವಾಗುವಂತೆ ಯೋಜನೆ ವ್ಯವಹಾರ ಸಂಪೂರ್ಣವಾಗಿ ಕನ್ನಡದಲ್ಲಿ ಇರುವಂತೆ ಅಗತ್ಯ ಕ್ರಮ ಕೈಕೊಳ್ಳಲು ನಿರ್ದೇಶನ ನೀಡಿರುತ್ತಾರೆ. ಅದರಂತೆ ಯೋಜನೆಯ ಅನುಷ್ಠಾನದಲ್ಲಿ ಕಟ್ಟು ನಿಟ್ಟಾಗಿ ಅಳವಡಿಸಿಕೊಂಡು ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ನಿರ್ದೇಶನ ನೀಡಲಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

ಸೂಚನೆ: 1) ಜಿಲ್ಲೆಯ ಎಲ್ಲ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ರವರಿಗೆ ತಮ್ಮ ತಾಲೂಕಿನ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಹಾಗೂ ಹೊರಗುತ್ತಿಗೆ ಆದಾರದ ,ಮೇಲೆ ನೇಮಕಾತಿಗೊಂಡ ತಾಂತ್ರಿಕ ಸಹಾಯಕರಿಗೆ ಸದರಿ ಪ್ರತಿ ತಲುಪಿಸಿ ಸೂಕ್ತ ನಿರ್ದೇಶನ ನೀಡಲು ಸೂಚಿಸಿದೆ.

2) ಅಧೀನ ಇಲಾಖಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ತಾಲೂಕಾ ಮಟ್ಟದ ಅಧಿಕಾರಿಗಳಿಗೆ ಸದರಿ ಪ್ರತಿ ತಲುಪಿಸಿ ಸೂಕ್ತ ನಿರ್ದೇಶನ ನೀಡಲು ಸೂಚಿಸಿದೆ.

ಕರ್ನಾಟಕ ಸರ್ಕಾರ

GOVERNMENT OF KARNATAKA

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

**ZILLA PANCHAYAT OFFICE, BELGAUM-590002**


ದೂರವಾಣಿ / Telephone: 0831-2407201, 0831-2407209

ಫ್ಯಾಕ್ಸ್ / Fax: 0831-2429662

e-mail: ceo_zp_bgm@nic.in, pddrdabgm@gmail.com


ಕ್ರ.ಜಿಪಂ/ರಾಗ್ರಾಉ/ವಿವ-3-VII/13-14 ಬೆಳಗಾವಿ, ದಿನಾಂಕ:16-01-2014.

ರಿಗೆ

1) ಕಾರ್ಯಕಾರಿ ಅಭಿಯಂತರರು,
   ಸಣ್ಣನೀರಾವರಿ (ಜಲ ಸಂಪನ್ಮೂಲ ಇಲಾಖೆ)
   ಬೆಳಗಾವಿ
2) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ಬೆಳಗಾವಿ.
3) ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ ಬೆಳಗಾವಿ,
4) ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು,ಬೆಳಗಾವಿ.
5) ಉಪ ನಿರ್ದೇಶಕರು,ರೇಷ್ಮೆ ಇಲಾಖೆ ಬೆಳಗಾವಿ.
6) ಉಪ ನಿರ್ದೇಶಕರು, ಪಶು ಸಂಗೋಪನೆ ಇಲಾಖೆ ಬೆಳಗಾವಿ.
7) ಜಂಟಿ ಕೃಷಿ ನಿರ್ದೇಶಕರು ಕೃಷಿ ಇಲಾಖೆ ಬೆಳಗಾವಿ.
8) ಜಿಲ್ಲೆಯ ಎಲ್ಲ ಕಾರ್ಯನಿರ್ವಾಹಕ ಅಧಿಕಾರಿಗಳು,
   ತಾಲೂಕ ಪಂಚಾಯತ, ಬೈಲಹೊಂಗಲ, ಬೆಳಗಾವಿ,ಚಿಕ್ಕೋಡಿ,
   ಗೋಕಾಕ,ಹುಕ್ಕೇರಿ, ಖಾನಾಪೂರ, ರಾಮದುರ್ಗ, ರಾಯಬಾಗ
   ಹಾಗೂ ಸವದತ್ತಿ

ವಿಷಯ : 2013-14ನೇ ಸಾಲಿನ ಆಯವ್ಯಯದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದ ಘೋಷಿಸಲಾದ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರು ಇವರ ಅ.ಸ ಪತ್ರ ಸಂ. ಗ್ರಾಅಪ :218:ಉಖಾಯೋ:2011 ದಿ:26-12-2013.

***

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂದಿಸಿದಂತೆ ಉಲ್ಲೇಖದಡಿ ಸ್ವೀಕೃತವಾದ ಸರ್ಕಾರದ ಪತ್ರ ಹಾಗೂ ಅಡಕಗಳ ನೆರಳು ಪ್ರತಿಗಳನ್ನು ಈ ಪತ್ರದ ಜೊತೆಗೆ ಲಗತ್ತಿಸಿ ಕಳುಹಿಸಲಾಗಿದೆ.

ಸದರಿ ಪತ್ರದಲ್ಲಿ 2013-14ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 15 ಅಂಶಗಳ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸೂಚಿಸಿರುತ್ತಾರೆ. ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಜಂಟಿ ಕಾರ್ಯದರ್ಶಿಗಳು ಸದರಿ ಯೋಜನೆಯ ಅಧಿನಿಯಮದ ಅನುಸೂಚಿ-I ಮತ್ತು ಅನುಸೂಚಿ - II ಕ್ಕೆ ಕೆಲವು ಬದಲಾವಣೆಗಳನ್ನು ತಂದು ತಿದ್ದುಪಡಿಯ ಮೂಲಕ ಅವುಗಳನ್ನು ಅನುಷ್ಠಾನದಲ್ಲಿ ಅಳವಡಿಸಿಕೊಳ್ಳುವಂತೆ ಸೂಚಿಸಿರುತ್ತಾರೆ. ಸದರಿ ತಿದ್ದುಪಡಿಯಲ್ಲಿ **ಚಿತಾಗಾರದ ಕಾಮಗಾರಿಗಳ ಚಟುವಟಿಕೆಗಳನ್ನು ಅನುಮತಿಸಲ್ಪಡುವ ಕಾಮಗಾರಿಗಳ ಚಟುವಟಿಕೆಗಳಲ್ಲಿ ಸೇರ್ಪಡೆ ಮಾಡಿರುತ್ತಾರೆ.**

ಯೋಜನೆಯ ಎಲ್ಲಾ ಕಾರ್ಯಕ್ರಮಗಳ ಜೊತೆಗೆ ಹಾಲಿ ಪರಿಷ್ಕೃತ ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿದ ಎಲ್ಲಾ 16 ಪ್ರವರ್ಗಗಳ ಕಾಮಗಾರಿಗಳನ್ನು ಹಾಗೂ ಅಧಿನಿಯಮದ ಅನುಸೂಚಿ-I ಮತ್ತು ಅನುಸೂಚಿ - II ಕ್ಕೆ ತಿದ್ದುಪಡಿಯ ಮೂಲಕ ಬದಲಾವಣೆಗಳನ್ನು ತಂದ ಇತರೆ ಕಾಮಗಾರಿಗಳನ್ನು ಸಹ ಅನುಷ್ಠಾನಗೊಳಿಸಲು ಸೂಚಿಸಿರುತ್ತಾರೆ.ಬರ ಪೀಡಿತ ತಾಲೂಕುಗಳಲ್ಲಿ ಕೂಲಿ ಕೇಳಿ ಬರುವ ಕಾರ್ಮಿಕರಿಗೆ ಉದ್ಯೋಗವನ್ನು ತಪ್ಪದೇ ಒದಗಿಸುವಂತೆ ನಿರ್ದೇಶಿಸಿರುತ್ತಾರೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ನೀಡಿರುವ ಸಲಹೆ ಸೂಚನೆಗಳನ್ನು ಕಟ್ಟುನಿಟ್ಟಾಗಿ ಅಳವಡಿಸಿಕೊಂಡು ಯೋಜನೆಯನ್ನು ಯಶ್ವಸಿಯಾಗಿ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ.

**ಪ್ರತಿಯನ್ನು ಮಾಹಿತಿ ಕುರಿತು ಸಲ್ಲಿಸಲಾಗಿದೆ.**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ,2,ನೇಮಹಡಿ, 3ನೇ ಹಂತ,ಬಹು ಮಹಡಿ ಕಟ್ಟಡ, ಡಾ:ಅಂಬೇಡಕರ ವೀದಿ. ಬೆಂಗಳೂರು-01

ಕರ್ನಾಟಕ ಸರ್ಕಾರ

GOVERNMENT OF KARNATAKA

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

**ZILLA PANCHAYAT OFFICE, BELGAUM-590002**


ದೂರವಾಣಿ / Telephone: 0831-2407201, 0831-2407209

ಫ್ಯಾಕ್ಸ್ / Fax: 0831-2429662

e-mail: ceo_zp_bgm@nic.in, pddrdabgm@gmail.com


---

ಕ್ರ.ಜಿಪಂ/ರಾಗ್ರಾಉ/ವಿವ-153 /13-14 ಬೆಳಗಾವಿ, ದಿನಾಂಕ: 20 -1-2014.

**ಅತೀ ಜರೂರು** **ಪ್ರಾಮುಖ್ಯತೆ ಮೇರೆಗೆ** ನೆನಪೋಲೆ

ರಿಗೆ

1) ಕಾರ್ಯಕಾರಿ ಅಭಿಯಂತರರು,
   ಸಣ್ಣನೀರಾವರಿ (ಜಲ ಸಂಪನ್ಮೂಲ ಇಲಾಖೆ)
   ಬೆಳಗಾವಿ
2) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
   ಸಾಮಾಜಿಕ ಅರಣ್ಯ ಬೆಳಗಾವಿ.
3) ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ ಬೆಳಗಾವಿ,
4) ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು,
   ಬೆಳಗಾವಿ.
5) ಉಪ ನಿರ್ದೇಶಕರು,ರೇಷ್ಮೆ ಇಲಾಖೆ ಬೆಳಗಾವಿ.
6) ಉಪ ನಿರ್ದೇಶಕರು, ಪಶು ಸಂಗೋಪನೆ ಇಲಾಖೆ ಬೆಳಗಾವಿ.
7) ಉಪ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಬೆಳಗಾವಿ.
8) ಜಂಟಿ ಕೃಷಿ ನಿರ್ದೇಶಕರು ಕೃಷಿ ಇಲಾಖೆ ಬೆಳಗಾವಿ.

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ 2014-15ನೇ ಸಾಲಿನ ಲೇಬರ್ ಬಜೆಟ್‌ನ್ನು ಒಗ್ಗೂಡಿಸುವಿಕೆ (Convergence) ಮೂಲಕ ತಯಾರಿಸುವ ಬಗ್ಗೆ

ಉಲ್ಲೇಖ: 1) ಸರ್ಕಾರದ ಪತ್ರ ಸಂ:ಗ್ರಾಅಪ:547 :ಉಖಾಯೋ:12 ಬೆಂಗಳೂರು. ದಿ:07-11-2013
2) ಈ ಕಾರ್ಯಾಲಯದ ಪತ್ರ ಸಮಸಂಖ್ಯೆ ದಿನಾಂಕ: -12-2013
3) ದಿನಾಂಕ: 18-1-2014 ರಂದು ಜರುಗಿದ ವಿಡಿಯೋ ಸಂವಾದದಲ್ಲಿ ನೀಡಿದ ನಿರ್ದೇಶನದತೆ

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂದಿಸಿದಂತೆ ಉಲ್ಲೇಖಿತ ಈ ಕಾರ್ಯಾಲಯದ ಪತ್ರದತ್ತ ತಮ್ಮ ಗಮನ ಸೆಳೆಯಲಾಗಿದೆ. ಸದರಿ ಪತ್ರದಲ್ಲಿ MGNREGA ಯೋಜನೆಯಡಿ 2014-15ನೇ ಸಾಲಿನ ಲೇಬರ್ ಬಜೆಟ್‌ನ್ನು ಅನುಷ್ಠಾನ ಇಲಾಖೆಗಳಾದ ಅರಣ್ಯ, ಜಲಾನಯನ ಅಭಿವೃದ್ಧಿ, ತೋಟಗಾರಿಕೆ, ಪಶು ಸಂಗೋಪನಾ, ರೇಷ್ಮೆ, ಮೀನುಗಾರಿಕೆ, ಕೃಷಿ, ಸಣ್ಣ ನೀರಾವರಿ,ಪಂ.ರಾ.ಇಂ ಇಲಾಖೆಗಳ ಅಧಿಕಾರಿಗಳೊಂದಿಗೆ ರೂಪಿಸಿ ಕಾಮಗಾರಿಗಳನ್ನು ಒಗ್ಗೂಡಿಸಿಕೊಂಡು ತಯಾರಿಸಲು ಸೂಚಿಸಿದ್ದು, ಒಗ್ಗೂಡಿಸುವಿಕೆಯ ಮೂಲಕ 2013-14ನೇ ಸಾಲಿನಲ್ಲಿ ಸಾಧಿಸಿರುವ ಪ್ರಗತಿಯನ್ನು ಹಾಗೂ 2014-15ನೇ ಸಾಲಿನಲ್ಲಿ ಲೇಬರ್ ಬಜೆಟ್‌ನ್ನು ಒಗ್ಗೂಡಿಸುವಿಕೆ ಯೋಜನೆಯನ್ನು ಸೇರಿಸಿರುವ ಕುರಿತು ತೆಗೆದುಕೊಂಡಿರುವ ಪ್ರಗತಿಯ ವರದಿಯನ್ನು ಪ್ರತಿ ತಿಂಗಳು ಆಯುಕ್ತಾಲಯಕ್ಕೆ ತಪ್ಪದೇ ಸಲ್ಲಿಸಲು ಸೂಚಿಸಿದ್ದು. ಈವರೆಗೂ ತಮ್ಮಿಂದ ಮಾಹಿತಿ ಬಾರದೆ ಇರುವದು ವಿಷಾದನೀಯ ಸಂಗತಿಯಾಗಿದೆ.

ಉಲ್ಲೇಖ (3) ರಂತೆ ದಿನಾಂಕ: 18-1-2014 ರಂದು ಜರುಗಿದ ವಿಡಿಯೋ ಸಂವಾದದಲ್ಲಿ ನೀಡಿರುವ ನಿರ್ದೇಶನದಂತೆ, 2013-14ನೇ ಸಾಲಿನಲ್ಲಿ ಒಗ್ಗೂಡಿಸುವಿಕೆಯಲ್ಲಿ ಸಾಧಿಸಿದ ಪ್ರಗತಿಯನ್ನು ಹಾಗೂ 2014-15ನೇ ಸಾಲಿನಲ್ಲಿ ಲೇಬರ್ ಬಜೆಟನಲ್ಲಿ ಒಗ್ಗೂಡಿಸುವಿಕೆ ಯೋಜನೆಯನ್ನು ಸೇರಿಸಿರುವ ಬಗ್ಗೆ ನಮೂನೆ 1 ರಿಂದ 4 ರ ವರೆಗೆ ನಮೂನೆಗಳನ್ನು ಆಯುಕ್ತಾಲಯದಿಂದ ತಮಗೆ ನೇರವಾಗಿ ಕಳಿಸಿರುವದಾಗಿ ವಿಡಿಯೋ ಸಂವಾದದಲ್ಲಿ ತಿಳಿಸಿರುವ ಹಿನ್ನೆಲೆಯಲ್ಲಿ ಒಂದು ವಾರದೊಳಗಾಗಿ ನಮೂನೆ 1 ರಿಂದ 4 ನ್ನು ತಯಾರಿಸಿ ಸಲ್ಲಿಸಲು ಕಟ್ಟುನಿಟ್ಟಾಗಿ ನಿರ್ದೇಶನ ನೀಡಲಾಗಿದೆ. ನೀವುಗಳು 1 ರಿಂದ 4 ನಮೂನೆಗಳಲ್ಲಿ ಮಾಹಿತಿಯನ್ನು ಕ್ರೋಡಿಕರಿಸಿ ಮುಂದಿನ ವಿಡಿಯೋ ಸಂವಾದದಲ್ಲಿ ತಿಳಿಸುವದು ಅವಶ್ಯವಾಗಿರುವದರಿಂದ ವಿಳಂಬಕ್ಕೆ ಅವಕಾಶ ನೀಡದಂತೆ ತಕ್ಷಣ ಸದರಿ ಮಾಹಿತಿಗಳನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ.

1) ಪ್ರತಿಯನ್ನು ಜಿಲ್ಲೆಯ ಎಲ್ಲಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ರವರಿಗೆ ಸೂಕ್ತ ಕ್ರಮಕ್ಕಾಗಿ.

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

# ZILLA PANCHAYAT OFFICE, BELGAUM-590002


ದೂರವಾಣಿ / Telephone: 0831-2407201, 0831-2407209
ಫ್ಯಾಕ್ಸ್/Fax: 0831-2429662
e-mail: ceo_zp_bgm@nic.in, pddrdabgm@mail.com


ಕ್ರಸಂ:ಜಿಪ ರಾಗ್ರಾಉ/ ವಿವ :75/2013-14 ದಿನಾಂಕ: 28 -01-2014.

ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲೂಕಾ ಪಂಚಾಯತ ಬೆಳಗಾವಿ/ಚಿಕ್ಕೋಡಿ
ಹುಕ್ಕೇರಿ/ರಾಯಭಾಗ

ವಿಷಯ: MGNREGA ಯೋಜನೆಯಡಿ ಸನ್ 2013-14 ನೇ ಸಾಲಿನಲ್ಲಿ 100 ದಿನಗಳಿಗಿಂತ ಕಡಿಮೆ ಮಾನವ ದಿನಗಳ ಸೃಜಿಸಿರುವ ಕುರಿತು.

ಉಲ್ಲೇಖ: 1) ದಿನಾಂಕ: 6-1-2014 ರಂದು ಜರುಗಿದ ಸಭೆಯಲ್ಲಿ ನೀಡಿದ ನಿರ್ದೇಶನದಂತೆ
2) 16-1-2014 ರ MIS ವರದಿ
3) ದಿನಾಂಕ: 16-1-2014
4) ದಿನಾಂಕ: 27-1-2014 ರಂದು ಜರುಗಿದ ಸಭೆಯಲ್ಲಿ ನೀಡಿದ ನಿರ್ದೇಶನದಂತೆ

ಮೇಲ್ಕಂಡ ವಿಷಯಕ್ಕೆ ಸಂಭಂಧಿಸಿದಂತೆ ದಿನಾಂಕ 27-1-2014 ರ MIS ವರದಿಯನ್ನು ಪರಿಶೀಲಿಸಲಾಗಿ MGNREGA ಯೋಜನೆಯಡಿ ಸನ್ 2013-14 ನೇ ಸಾಲಿನಲ್ಲಿ 100 ಮಾನವ ದಿನಗಳಿಗಿಂತ 16 ಗ್ರಾಮ ಪಂಚಾಯತಿಗಳು ಕಡಿಮೆ ಸೃಜನೆ ಮಾಡಿರುವದು ಕಂಡು ಬಂದಿರುತ್ತದೆ. ಸದರಿ ಗ್ರಾಮ ಪಂಚಾಯತಿಗಳಲ್ಲಿ ಕನಿಷ್ಠ ಮಾನವದಿನಗಳನ್ನು ಸೃಜಿಸಿರುವದಕ್ಕೆ ವಿಷಾದ ವ್ಯಕ್ತಪಡಿಸುತ್ತಾ ಆರ್ಥಿಕ ವರ್ಷವು ಮುಕ್ತಾಯದ ಹಂತದಲ್ಲಿದರೂ ಕೂಡ ಕಾಮಗಾರಿಗಳನ್ನು ಕೈಕೊಳ್ಳದಿರುವದು ಕಂಡುಬಂದಿರುತ್ತದೆ. ಇದರಿಂದಾಗಿ ಸದರಿ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷತನವನ್ನು ತೋರಿಸಿರುವದು ಮೇಲನೋಟಕ್ಕೆ ಕಂಡುಬಂದಿರುತ್ತದೆ. ಜನೆವರಿ ಅಂತ್ಯದೊಳಗಾಗಿ ಮೇಲ್ಕಂಡ ಗ್ರಾಮ ಪಂಚಾಯತಿಗಳಲ್ಲಿ 100 ದಿನಗಳಿಗಿಂತ ಹೆಚ್ಚಿಗೆ ಮಾನವ ದಿನಗಳನ್ನು ಸೃಜಿಸಲು ಕಟ್ಟುನಿಟ್ಟಿನ ನಿರ್ದೇಶನವನ್ನು ದಿನಾಂಕ: 6-1-2014 ರಂದು ಜರುಗಿದ ಸಭೆಯಲ್ಲಿ ನಿರ್ದೇಶನ ನೀಡಿದ್ದರೂ ಕೂಡಾ ಈ ಕೆಳಕಂಡ 16 ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಯೋಜನೆಯ ಅನುಷ್ಠಾನದಲ್ಲಿ ಉದಾಸೀನತೆ, ನಿರ್ಲಕ್ಷತೆ ಹಾಗೂ ಮೇಲಾಧಿಕಾರಿಗಳ ಆದೇಶವನ್ನು ಉಲ್ಲಂಘಿಸಿರುತ್ತಾರೆ.

| ಅ.ನಂ | ತಾಲೂಕಿನ ಹೆಸರು | ಗ್ರಾಮ ಪಂಚಾಯತ | ಸೃಜಿಸಲಾದ ಮಾನವ ದಿನಗಳು |
|---|---|---|---|
| 1 | ಬೆಳಗಾವಿ | ಬೆನಕನಹಳ್ಳಿ | 14 |
| 2 | | ಬಡಸ ಕೆ ಎಚ್ | 25 |
| 3 | | ಮಾಸ್ತಮರ್ಡಿ | 25 |
| 4 | | ಪೀರನವಾಡಿ | 25 |
| 5 | | ಹಂದಿಗನೂರ | 45 |
| 6 | | ಹಲಗಾ | 75 |
| 7 | | ಹೊನಗಾ | 75 |
| 8 | | ಅಂಕಲಗಿ | 85 |
| 9 | ಚಿಕ್ಕೋಡಿ | ಸೆಂದೂರ | 0 |
| 10 | | ಶಿರಗಾಂವ | 48 |
| 11 | | ಚಂದೂರ | 25 |
| 12 | ಹುಕ್ಕೇರಿ | ಗೋಟುರ | 25 |
| 13 | | ಸೋಲಾಪೂರ | 25 |
| 14 | | ಯಮಕನಮರ್ಡಿ | 25 |
| 15 | ರಾಯಭಾಗ | ಜಲಾಲಪೂರ | 0 |
| 16 | | ಕಪ್ಪಲಗುದ್ದಿ | 20 |

ದಿನಾಂಕ: 31-1-2014 ರೊಳಗಾಗಿ ಸದರಿ ಗ್ರಾಮ ಪಂಚಾಯತಿಯಲ್ಲಿ 100 ದಿನಗಳಿಗಿಂತ ಹೆಚ್ಚಿಗೆ ಮಾನವ ದಿನಗಳನ್ನು ಸೃಜಿಸದೆ ಇರುವ PDO ಮೇಲೆ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯಂತೆ ಅನುಭಂಧ 1 ರಿಂದ 4 ತಯಾರಿಸಿ ಶಿಸ್ತು ಕ್ರಮಕೈಕೊಳ್ಳಲು ಪ್ರಸ್ತಾವನೆ ತಯಾರಿಸಿ ಸಲ್ಲಿಸಲು ನಿರ್ದೇಶಿಸಲಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

ಕರ್ನಾಟಕ ಸರ್ಕಾರ

GOVERNMENT OF KARNATAKA

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

**ZILLA PANCHAYAT OFFICE, BELGAUM-590002**


ದೂರವಾಣಿ Telephone: 0831-2407201, 0831-2407209

ಫ್ಯಾಕ್ಸ / Fax: 0831-2429662

e-mail: ceo_zp_bgm@nic.in


ಕ್ರ.ಜಿಪಂ/ರಾಗ್ರಾಉ/ವಿವ-58 /2013-14 ಬೆಳಗಾವಿ, ದಿನಾಂಕ: 28-1-2014

## : ಕಾರಣ ಕೇಳುವ ನೋಟಿಸು :

ವಿಷಯ: 2012-13 ನೇ ಸಾಲಿನಲ್ಲಿ ಮಹಾತ್ಮಾ ಗಾಂದಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಬಾಕಿ ಬಿಲ್ಲನ್ನು ಪಾವತಿಸದೇ ಇರುವ ಬಗ್ಗೆ

ಉಲ್ಲೇಖ: ದಿನಾಂಕ 27-1-2014 ರಂದು DRDA ಶಾಖೆಯ ಸಭೆಯಲ್ಲಿ ನೀಡಿದ ನಿರ್ದೇಶನದಂತೆ .

ಸನ್ 2012-13 ನೇ ಸಾಲಿನಲ್ಲಿ ಮಹಾತ್ಮಾ ಗಾಂದಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಬಾಕಿ ಬಿಲ್ಲನ್ನು ಪಾವತಿಸದೇ ಇರುವ ಬಗ್ಗೆ ದಿ: 27-1-2014 ರ Anticipated Report ನ್ನು ಪರಿಶೀಲಿಸಲಾಗಿ ಈ ಕೆಳಗಿನಂತೆ ಪಾವತಿಗೆ ಬಾಕಿ ಇರುವದು ಕಂಡು ಬಂದಿರುತ್ತದೆ.

| .ಅ.ನಂ | ತಾಲೂಕಿನ ಹೆಸರು | 2012-13 ನೇ ಸಾಲಿನ ಬಾಕಿ ಬಿಲ್ಲು (ಲಕ್ಷಗಳಲ್ಲಿ ) | ಶರಾ |
|---|---|---|---|
| 1 | ಅಥಣಿ | 8.71 | |
| 2 | ಬೆಳಗಾವಿ | 31.74 | |
| 3 | ಬೈಲಹೊಂಗಲ್ | 1.16 | |
| 4 | ಚಿಕ್ಕೋಡಿ | 9.90 | |
| 5 | ಗೋಕಾಕ | 14.77 | |
| 6 | ಹುಕ್ಕೇರಿ | 38.76 | |
| 7 | ಖಾನಾಪೂರ | 55.03 | |
| 8 | ರಾಮದುರ್ಗ | 27.48 | |
| 9 | ರಾಯಭಾಗ | 5.50 | |
| 10 | ಸವದತ್ತಿ | 36.67 | |
| | ಒಟ್ಟು | 229.73 | |

ನಿರ್ದೇಶನಾಲಯದಿಂದ efms ಖಾತೆಗೆ ಅನುದಾನ ಜಮಾ ಆಗಿದ್ದರೂ ಸಹ ನೀವು ಬಾಕಿ ಬಿಲ್ಲುಗಳನ್ನು ಪಾವತಿಸದೇ ಇರುವದು ಕಂಡು ಬಂದಿರುತ್ತದೆ. ಅನುದಾನ ಲಭ್ಯವಿದ್ದರೂ ಸಹ ಬಾಕಿ ಬಿಲ್ಲನ್ನು ಪಾವತಿಸದೇ ನೀವು MGNREGA ಮಾರ್ಗಸೂಚಿಯನ್ನು ಉಲ್ಲಂಘಿಸಿರುತ್ತೀರಿ. ನೀವು ನಿಮ್ಮ ವ್ಯಾಪ್ತಿಯ ಗ್ರಾಮ ಪಂಚಾಯತಿಯ ಅಭಿವೃದ್ದಿ ಅಧಿಕಾರಿಯವರಿಗೆ ಸೂಕ್ತ ಮಾರ್ಗದರ್ಶನ ನೀಡಿ ಸದರಿ ಬಾಕಿ ಬಿಲ್ಲನ್ನು ಪಾವತಿಸಲು ಕ್ರಮ ಕೈಕೊಳ್ಳತಕ್ಕದ್ದು. ತಪ್ಪಿದಲ್ಲಿ ಈ ರೀತಿಯ ವಿಳಂಬಕ್ಕೆ ಸಕಾರಣವನ್ನು ನೀಡಲು ತಿಳಿಸಲಾಗಿದೆ. 3 ದಿನಗಳೊಳಗಾಗಿ ತಮ್ಮಿಂದ ಸಕಾರಣದೊಂದಿಗೆ ಬಾಕಿ ಬಿಲ್ಲು ಪಾವತಿಸಿದ ಬಗ್ಗೆ ವರದಿ ನಿರೀಕ್ಷಿಸಲಾಗಿದೆ. ತಪ್ಪಿದಲ್ಲಿ ಏಕಪಕ್ಷೀಯವಾಗಿ ಶಿಸ್ತು ಕ್ರಮ ಕೈಕೊಳ್ಳಲು ಕ್ರಮ ಜರುಗಿಸಲಾಗುವದು ತಿಳಿಯಿರಿ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಜಿಲ್ಲಾ ಪಂಚಾಯತ ಬೆಳಗಾವಿ

ರಿಗೆ

MIS Co-Ordinator

Taluka Panchayat ____________

( ಸಂಭಂಧಪಟ್ಟ ಕಾ.ನಿ.ರವರ ಮುಖಾಂತರ )